ಒಡ್ಡುವುದನ್ನು ತೊಡೆದು ಹಾಕಲು ಮನೋವೈದ್ಯ ತಂತ್ರ ಬಳಸುತ್ತಿರುವುದು ಮನದಟ್ಟಾಯಿತು.

ವ್ಯಕ್ತಿ ತನ್ನ ದಿನನಿತ್ಯದ ಆಗುಹೋಗುಗಳನ್ನು ಗ್ರಹಿಸಿ ನಿರಂತರ ಕಲಿಕೆ ಪ್ರಕ್ರಿಯೆಗೆ ತನ್ನನ್ನು ಒಡ್ಡಿಕೊಳ್ಳುತ್ತಿರುವಾಗ ಹಳೆಯ ಕಲಿಕೆಯಲ್ಲಿ ನಿರ್ದಿಷ್ಟ ಕಲಿಕೆಯನ್ನು ಮಾತ್ರ ಮರೆಸುವ ವಿಧಾನ ಮನೋವೈದ್ಯರಿಗೆ ಸವಾಲಿದ್ದಂತೆ. ಅಂಥದ್ದರಲ್ಲಿ ನಿಪುಣ ಮನೋವೈದ್ಯರ ಮಾರ್ಗದರ್ಶನದಲ್ಲಿ ರೇವಾನಿಗೆ ನಿಜಕ್ಕೂ ಹೊಸ ಅನುಭೂತಿ ಮೂಡತೊಡಗಿತ್ತು.

ಅಪಘಾತವಾದ ದೃಶ್ಯಾವಳಿಗಳು ಮನಃಪಟಲದಲ್ಲಿ ಮೂಡಿಸುವಂತೆ ಸೂಚಿಸಿ ಅದನ್ನು ಅಳಿಸುವ ಕ್ರಿಯೆಯನ್ನು ಸೂಚಿಸಿದಾಗ ಅದು ನಿಜಕ್ಕೂ ಅದ್ಭುತ ಚಮತ್ಕಾರದಂತೆ ತೋರಿತ್ತು. ಆ ಒಂದು ಕೆಟ್ಟ ಗಳಿಗೆ ತಂದ ನೋವು ದುಮ್ಮಾನಗಳು ನೆನಪಿನಾಳದಲ್ಲಿ ಕರಿಛಾಯೆಯಾಗಿ ಉಳಿದು ಅವನ ದೇಹ ಮನಸ್ಸನ್ನು ಆಂತರಿಕವಾಗಿ ಜರ್ಜರಿತಗೊಳಿಸಿತ್ತು. ಅದನ್ನು ಅಳಿಸುವ ಕ್ರಿಯೆಯಿಂದ ಕೇವಲ ಮನಸ್ಸು ಹಗುರವಾಗಿದ್ದಲ್ಲದೆ ದೇಹವೂ ಪುನರ್ ಚೇತನಗೊಂಡಂತೆ ಸಕಾರಾತ್ಮಕವಾಗಿ ರೇವಾ ಸ್ಪಂದಿಸಿ ಚಾಲನೆಗೆ ಸಿದ್ಧನಾಗಿದ್ದ.

ಅವನು ರಸ್ತೆಯಲ್ಲಿ ವಾಹನ ಓಡಿಸುತ್ತಿದ್ದಾಗ ಹಾದಿಬದಿಯಲ್ಲಿನ ಮನುಷ್ಯಾಕೃತಿಯ ಹೋಲೋಗ್ರಾಮ್‌ಗಳು ಸಹ ವಿವಿಧ ವಾಹನಗಳಲ್ಲಿ ಚಲಿಸುತ್ತಿದ್ದವು. ನೆಲದ ಮೇಲಿನ ಮೋಷನ್ ಪ್ಲಾಟ್ ಫಾರ್ಮ್ ಹಾಗೂ ಸಿಮುಲೇಟರ್‌ಗಳು ವಾಹನ ಚಾಲನೆಯನ್ನು ಮತ್ತಷ್ಟು ನೈಜವಾಗಿಸಿತ್ತು. ಕೆಲವು ಅಡ್ಡಾದಿಡ್ಡಿ ಬಂದರೆ ಕೆಲವು ನಿರ್ದಿಷ್ಟ ಪಥದಲ್ಲಿ ಸಾಗುತ್ತಿದ್ದವು. ದಿಢೀರೆಂದು ಅಡ್ಡಾದಿಡ್ಡಿ ಬರುವ ವಾಹನಗಳೊಂದಿಗೆ ಘರ್ಷಣೆಯಾಗುವುದನ್ನು ತಪ್ಪಿಸಲು ಇದ್ದುದು ಕೆಲವೇ ಕ್ಷಣಗಳು! ಅಷ್ಟರಲ್ಲಿಯೇ ವಿವೇಚನೆಯನ್ನು ಬಳಸಿ ವಾಹನಕ್ಕೆ ತಕ್ಷಣ ಬ್ರೇಕ್ ಜಡಿಯುವುದೋ ಇಲ್ಲವೇ ಬದಿಗೆ ಸರಿದು ಓಡಿಸುವುದನ್ನೋ ಮಾಡಬೇಕಿತ್ತು!

ಇದೆಂತಹ ಪರೀಕ್ಷೆ! ರೇವಾನಿಗೆ ತನ್ನ ಯೌವನದ ದಿನಗಳು ಮರುಕಳಿಸಿದಂತಾಗಿತ್ತು. ತಾನು ವಿದ್ಯಾಭ್ಯಾಸವನ್ನು ಆನ್‌ಲೈನ್‌ನಲ್ಲಿ ಮುಂದುವರಿಸುತ್ತಾ ಹಗಲಿನ ವೇಳೆ ಒಂದು ಉಪಹಾರ ಗೃಹದಲ್ಲಿ ಡ್ರೋನ್ ಆಪರೇಟರ್ ಹುದ್ದೆಯನ್ನು ನಿರ್ವಹಿಸುತ್ತಿದ್ದ. ಅದರಿಂದ ಬಂದ ಅಲ್ಪಸ್ವಲ್ಪ ಆದಾಯದಿಂದ ತಿಂಗಳ ಕಂತಿನಲ್ಲಿ ಕಟ್ಟುವ ಕರಾರಿನಲ್ಲಿ ಒಂದು ದ್ವಿಚಕ್ರ ವಾಹನ ಖರೀದಿಸಿದ್ದ. ಹೊಸದರಲ್ಲಿ ಇಡೀ ಸಾರಿಗೆ ವ್ಯವಸ್ಥೆಗೆ ಸವಾಲೊಡ್ಡುವಂತೆ ವೇಗದಿಂದ ರಸ್ತೆಯ ಇತರ ವಾಹನ ಚಾಲಕರು ಬೆದರುವಂತೆ ಓಡಿಸುತ್ತಿದ್ದ. ವೇಗದ ಮಿತಿ ಮೀರಿದಾಗ ಸಂಚಾರ ವಾರ್ಡನ್‌ಗಳು ಅವನ ಸಂಬಳದಿಂದ ದಂಡದ ಮೊತ್ತವನ್ನು ಕಡಿತಗೊಳಿಸಿದ್ದುಂಟು. ಇದರಿಂದ ಧೃತಿಗೆಟ್ಟವನು ಹೊರವಲಯದಲ್ಲಿ ಕ್ರಾಸ್‌ಕಂಟ್ರಿ ರೈಡ್‌ಗೆ ತನ್ನ ಗೆಳೆಯರ ಬಳಗದೊಂದಿಗೆ ಸವಾರಿಗೆ ಹಲವು ಬಾರಿ ಹೊರಟಿದ್ದ.

ಅಂತಹ ಒಂದು ಕೆಟ್ಟ ಗಳಿಗೆಯಲ್ಲಿ ಅವನ ವಾಹನ ಅಪಘಾತಕ್ಕೀಡಾಗಿದ್ದು, ಆ ಘರ್ಷಣೆಗೆ ಅವನ ದೇಹ ನಲುಗಿ ಕೆಲವು ಅಂಗಾಂಗಗಳೇ ಕತ್ತರಿಸಿಹೋಗಿದ್ದವು. ಕೃತಕ ವ್ಯವಸ್ಥೆಯೇನೋ ಆಯಿತು. ಆದರೆ ಹಿಂದಿನಂತೆ ಅದೇ ನೌಕರಿಯಲ್ಲಿ ಮುಂದುವರಿಸಲು ದೇಹ ಹಾಗೂ ಮನಸ್ಸು ಒಪ್ಪದಾಗಿತ್ತು. ಈ ಮಿತಿಯನ್ನು ಮೀರಿ ತಾನಿಂದು ಆತ್ಮವಿಶ್ವಾಸದಿಂದ ವರ್ಚ್ಯುಯಲ್ ರಿಯಾಲಿಟಿಯ ಪರದೆಯ ಮೇಲೆ 4ಡಿ ತಂತ್ರಜ್ಞಾನದಲ್ಲಿ ಮೂಡಿದ ರಸ್ತೆಯ ಮೇಲೆ ವಾಹನ ಚಲಾಯಿಸಿದ್ದು, ನಿಜವೇನೋ ಎಂಬ ಭ್ರಾಂತಿ ಮೂಡಿಸಿತ್ತು.

'ನಾನು ವಾಹನ ಚಾಲನೆ ನಿಲ್ಲಿಸಿ ಹಲವು ವರ್ಷಗಳೇ ಆಗಿವೆ. ಈಗ ಮತ್ತೆ ಅದನ್ನು ಮುಂದುವರೆಸಬಹುದೇ?' ಮನೋವೈದ್ಯರನ್ನು ಕೇಳಿದ.

'ಈಗ ನಿಮಗೆ ಹಳೆಯ ಅನುಭವದ ಆಧಾರದ ಮೇಲೆ ವಾಹನ ಚಾಲನೆ ಕಷ್ಟಕರವಾಗಿಲ್ಲ. ಆದರೂ ಅಪಘಾತದ ಬಳಿಕ ನಿಮ್ಮ ಪರವಾನಗಿ ರದ್ದಾಗಿರುವುದರಿಂದ ನೀವು ಮತ್ತೊಮ್ಮೆ ಪರವಾನಗಿಗೆ ಕೋರಿಕೆ ಸಲ್ಲಿಸಿ ತೃಪ್ತಿಕರವೆಂದು ಹೊಸ ಆದೇಶ ಬರುವವರೆಗೂ ವಾಹನ ಚಾಲನೆ ಮಾಡುವಂತ್ತಿಲ್ಲ. ಆದರೆ ಮುಂದೆ ನಿಮ್ಮ ಅನುಭವದ ಆಧಾರದ ಮೇಲೆ ಸಂಚಾರ ಕೆಲಸದಲ್ಲಿ ಸಹಾಯಹಸ್ತ ಚಾಚಲಿಕ್ಕಾಗಿಯೇ ಇಷ್ಟೆಲ್ಲಾ ತರಬೇತಿಯ ಕಸರತ್ತುಗಳನ್ನು ನಾವು ಕೈಗೊಂಡಿರುವುದು.'

ಮನೋವೈದ್ಯರ ಸ್ಪಷ್ಟ ನುಡಿ ಅವನ ಅನುಮಾನದ ಪೆಡಂಭೂತವನ್ನು ಒಮ್ಮೆಲೇ ಹೊಡೆದೋಡಿಸಿತ್ತು.

ಒಂದೆರಡು ಬಾರಿ ತರಬೇತಿಯ ಅವಧಿಯಲ್ಲಿ ಅಪಘಾತಗಳಾದಾಗ ತರಬೇತುದಾರರು ಮತ್ತೆ ಕೆಲವು ದಿನಗಳವರೆಗೆ ತರಬೇತಿಗೆ ಹಾಜರಾಗಲು ತಿಳಿಸಿದ್ದರು. ಅದು ಅವಶ್ಯಕವೂ ಆಗಿತ್ತು.

* * *

ಹನ್ನಾಳಿಗೆ ಮರುದಿನವೂ ಡ್ರೈವಿಂಗ್ ಸ್ಕೂಲ್‌ನಲ್ಲಿಯೇ ಡ್ಯೂಟಿಗೆ ನಿಯೋಜಿಸಲಾಗಿತ್ತಾದ್ದರಿಂದ ಅಲ್ಲಿಗೆ ತಂಡೋಪತಂಡವಾಗಿ ಆಗಮಿಸಿದ ಅರೆ ಮಾನವಪಡೆಯ ಸದಸ್ಯರ ನೋಂದಾವಣೆಗೆ ಸಹಾಯ ಮಾಡತೊಡಗಿದ್ದಳು. ಅವಿರತ್‌ನಿಗೆ ಆಗಿಂದಾಗ್ಗೆ ಪ್ರಕರಣಗಳು ದಾಖಲಾಗುತ್ತಿದ್ದರಿಂದ ಅವುಗಳ ಕಡೆ ಗಮನ ಹರಿಸಬೇಕಿದ್ದು, ಹೆಚ್ಚುವರಿ ಕೆಲಸದಿಂದ ವಿನಾಯಿತಿ ದೊರಕಿತ್ತು.

ಡ್ಯೂಟಿಯ ಬಳಿಕ ಮನೆಗೆ ಹೋಗುವ ರಸ್ತೆ ಮಾರ್ಗದಲ್ಲಿನ ವೃತ್ತವೊಂದರ ವೀಡಿಯೋ ವಾಲ್‌ನಲ್ಲಿ ಎಷ್ಟು ಮಂದಿ ಅರೆಮಾನವ ಪಡೆಯ ಸದಸ್ಯರು ತರಬೇತಿಗೆ ಹಾಜರಾಗಿ ಮುಖ್ಯವಾಹಿನಿಗೆ ಸೇರ್ಪಡೆಯಾದರೆಂಬ ಅಂಕಿ ಅಂಶಗಳನ್ನು ಆಡಳಿತ ವರ್ಗದ ಚಾನಲ್ ಬಿತ್ತರಿಸುತ್ತಿತ್ತು. ಅಂದಿನ ಪ್ರಚಲಿತ ವಿದ್ಯಮಾನಗಳು ಅಂದಂದೇ ಜನರಿಗೆ ತಲುಪಿ ಅವರ ಅಭಿಪ್ರಾಯ ಸಂಗ್ರಹವೂ ಆಗಿಂದಾಗ್ಗೆ ಆಗುವುದೂ ಕಾಣಬರುತ್ತಿತ್ತು. ಅರೆಮಾನವ ಪಡೆಯ ಸದಸ್ಯರನ್ನು ಮುಖ್ಯವಾಹಿನಿಗೆ ತಂದು ಅವರಿಗೆ ನೌಕರಿ ನೀಡುವುದು ಸರಿಯೇ ಅಥವಾ ತಪ್ಪೇ ಎಂಬುದರ ಬಗ್ಗೆಯೂ ಅಭಿಪ್ರಾಯ ಸಂಗ್ರಹ ನಡೆದು, ಅದು ಆಡಳಿತ ವರ್ಗದ ಮುಂದಿನ ನಿರ್ಧಾರಕ್ಕೆ ಸಹಾಯವಾಗುತ್ತಿತ್ತು. ಜನರಿಂದ ಅಭಿಪ್ರಾಯ ಸಂಗ್ರಹವು ಅವರಿಗೆ ನೀಡಲಾದ ವಿಶೇಷ ಆಪ್‌ನಿಂದ ಪಡೆಯುವ ಕ್ರಿಯೆಯಿಂದ ಒಬ್ಬ ವ್ಯಕ್ತಿಗೆ ಒಂದು ಪ್ರಶ್ನೆಗೆ ಒಂದೇ ಬಾರಿ ಅಭಿಪ್ರಾಯ ನೀಡುವ ಅವಕಾಶವಿತ್ತು. ಜನರ ಒಲವು ಯಾರಿಗಿದೆ ಎಂಬ ಕುತೂಹಲ ಅವಳಿಗೂ ಕಾಡಿತ್ತಾದರೂ ಅಂಕಿ ಅಂಶಗಳು ಪ್ರತಿಕ್ಷಣವೂ ಏರಿಳಿತವನ್ನು ತೋರಿಸುತ್ತಿತ್ತು.

ಮನೆಯಲ್ಲಿ ರೊಬೋ ಮಾಮ್ ಉಪಚರಿಸಿದ ರಾತ್ರಿಯ ಊಟ ಸೇವಿಸಿದ ಬಳಿಕ ಅವಿರತ್‌ನನ್ನು ಸಂಪರ್ಕಿಸಿ ತನ್ನ ಮನದ ತಳಮಳವನ್ನು ವ್ಯಕ್ತಪಡಿಸಿದ್ದಳು. 'ಪಡೆಯ ಸದಸ್ಯರನ್ನು ಸಂಚಾರಕ್ರಿಯೆಗೆ ಬಳಸಿಕೊಳ್ಳುವ ವಿಚಾರಕ್ಕೆ ಜನರಲ್ಲಿ ನಕಾರಾತ್ಮಕ ಪ್ರತಿಕ್ರಿಯೆ ಬಂದರೆ ಆ ಯೋಜನೆಗೆ ಹೊಡೆತ ಬೀಳುವುದಿಲ್ಲವೇ?'

'ಆದರೆ ಅದು ಸಭೆಯಲ್ಲಿ ಎಲ್ಲರಿಂದಲೂ ಅಭಿಪ್ರಾಯ ಪಡೆದು ನಿರ್ಧರಿಸಿದ್ದಾಗಿದೆ. ಪಡೆಯ ಸದಸ್ಯರು ಹೆಚ್ಚಾಗಿ ನಗರವಾಸಿಗಳೇ ಆಗಿರುವುದರಿಂದ ನಗರ ಪ್ರದೇಶದವರ ಅಭಿಪ್ರಾಯಕ್ಕೆ ಹೆಚ್ಚು ಒತ್ತು ನೀಡಲಾಗುತ್ತದೆ' ಎಂದು ಸಮಾಧಾನ ಪಡಿಸಿದ.

'ನಾಳೆ ಒಟ್ಟಾರೆ ಫಲಿತಾಂಶ ಹೊರಬರುತ್ತದೆ ಎಂದು ಒಪೀನಿಯನ್ ಪೋಲ್ ಬೇರೆ ತಿಳಿಸುತ್ತಿದೆ. ಪಡೆಯ ತರಬೇತಿಯ ಕಾಲಾವಧಿಯೂ ನಿರ್ದಿಷ್ಟಪಡಿಸಿರುವುದರಿಂದ ಫಲಿತಾಂಶದಿಂದ ತರಬೇತಿಯ ಮೇಲೆ ಯಾವುದೇ ರೀತಿಯ ಪರಿಣಾಮವಾಗದೇನೋ...' ಎಂದವಳು ತನ್ನ ಅನಿಸಿಕೆ ವ್ಯಕ್ತಪಡಿಸಿದಳು.

'ಅಂತೂ ನಾವು ಕೇವಲ ನೇತಾರರನ್ನು ಆಯ್ಕೆ ಮಾಡಲಷ್ಟೇ ಮತ ಚಲಾವಣೆ ಇಟ್ಟಿದ್ದರೆ ಸರಿ ಇತ್ತೇನೋ? ಈ ಮಾಧ್ಯಮ ಕ್ರಾಂತಿ ಪ್ರಜಾಪ್ರಭುತ್ವಕ್ಕೆ ಒತ್ತು ನೀಡುತ್ತಾ ಪ್ರತಿಯೊಂದು ಪ್ರಮುಖ ನಿರ್ಧಾರಗಳಿಗೂ ಸಾರ್ವಜನಿಕರ ಅಭಿಪ್ರಾಯ ಸಂಗ್ರಹದಿಂದ ನಿರ್ಧಾರ ತೆಗೆದುಕೊಳ್ಳುವಂತಾಗಿರುವುದು ಒಂದು ವಿಪರ್ಯಾಸವೇ ಸರಿ'.

'ಆಡಳಿತ ವರ್ಗದ ಚುನಾಯಿತ ಪ್ರತಿನಿಧಿಗಳ ಪಾತ್ರ ಪ್ರಮುಖ ನಿರ್ಧಾರಗಳನ್ನು ಹೊರತುಪಡಿಸಿ ಇತರೆ ವಿಚಾರಗಳಿಗೆ ಸೀಮಿತವಾಗಿರುವುದು ಪ್ರಜಾಪ್ರಭುತ್ವದ ಕರಾಳ ನಡಿಗೆ' ಅವನ ಬೇಸರಕ್ಕೆ ಇಂಬು ಕೊಡುವಂತೆ ಅವಳು ವಿಷಾದದಿಂದ ನುಡಿದಳು.

'ಆದರೆ ಅಷ್ಟಕ್ಕೆ ಆಡಳಿತ ವರ್ಗ ಪಡೆಯ ಸದಸ್ಯರ ತರಬೇತಿಯನ್ನು ಮೊಟಕುಗೊಳಿಸಿ ಅವರಿಗೆ ಸಿಗುವ ನೌಕರಿಗೆ ಕುತ್ತು ತರಲಾರದೆಂಬ ವಿಶ್ವಾಸವಿತ್ತು.'

'ಅವಿರತ್. ನನಗೊಂದು ವಿಚಾರ ಬಹಳ ಹಿಂದಿನಿಂದಲೂ ಕಾಡುತ್ತಿದೆ. ಆದರೆ ಅದನ್ನು ಅನುಷ್ಠಾನಗೊಳಿಸಲು ಕೊಂಚ ಸಮಯ ಬೇಕಿದೆಯೇನೋ' ಅವಳಿಗೆ ಆ ವಿಷಯ ಚಿಕ್ಕದಾದರೂ ಬಹಳ ಮುಖ್ಯವೆನಿಸಿತ್ತು.

'ಯಾವ ವಿಚಾರ?'

**ಸಶೇಷ**